XII. ದೊಡ್ಡಿಗೆ ಕೂಡುವ ದನಕರುಗಳನ್ನು ಕಾವಲಗಾರರು ಈಗಲಗಿಂತಲೂ ಹೆಚ್ಚಾಗಿ ನಿಗಾವಣೆ ಮಾಡಬೇಕೆಂತಲೂ ಅವುಗಳನ್ನು ಹೀನಕ್ರಯಕ್ಕೆ ಕೊಡಕೂಡದೆಂತಲೂ 1903ನೆ ಇಸವಿ ಪ್ರಜಾ ಪ್ರತಿನಿಧಿ ಸಭೆಯ 67ನೆ ವಿಷಯದಲ್ಲಿ "Cattle Tresspass Regulation" ನಲ್ಲಿ ಈ ಭಾಗಕ್ಕೆ ತಕ್ಕ ಏರ್ಪಾಟು ವಿಧಿಸಿರುತ್ತೆಂದು ರಿಕಾರ್ಡು ಮಾಡಲ್ಪಟ್ಟಿತು.

XIII. ಮುಂದೆ ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮ॥ ಅಂಚೈ ಅಣ್ಣಯ್ಯಪಂಡಿತರನ್ನು ಮತ್ತು ಅಡ್ವೊಕೇಟ್ ರಾಮಣ್ಣನವರನ್ನು ಸಹ ಮೆಂಬರುಗಳಾಗಿ ನಾನ್ ಅಫಿಷಿಯಲ್ ಮೆಂಬರುಗಳು ಚುನಾಯಿಸಿದರು.

XIV. ತಾಲ್ಲೂಕಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳಿಗೆ ಆಯಾಯ ತಾಲ್ಲೂಕು ಬೋರ್ಡಿನ ಪ್ರೊಸೀಡಿಂಗ್ಸ್ ಕಾಪಿಯನ್ನು ಕೊಡುವಂತೆ ಮಾಡಬೇಕೆಂದು ಮ॥ ಅಂಚೈ ಅಂಜಯ್ಯ ಪಂಡಿತರು ಸಲಹೆ ಕೊಟ್ಟದ್ದರ ಮೇಲೆ ಈರೀತಿ ಮಾಡಲು ತಾಲ್ಲೂಕು ಬೋರ್ಡು ವೈಸಿ ಪ್ರೆಸಿಡೆಂಟರಿಗೆ ಬರೆಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

XV. ಮ॥ ಬಾದಾಮಿ ಭೀಮರಾಯರು ಕೊಟ್ಟ ಈ ಕೆಳಗೆ ಕಂಡ ಸಲಹೆಗಳು ಚರ್ಚೆ ಮಾಡಲ್ಪಟ್ಟವು :—

(i) ನಂಜನಗೂಡು ತಾಲ್ಲೂಕು ಹುರಾ ರಸ್ತೆಯನ್ನು ರಿಪೇರಿ ಮಾಡಬೇಕಲ್ಲದೆ ಹಡಿಯಾಲದ ವರೆಗೆ ಬೆಳೆಯಿಸಬೇಕು.

(ii) ಸಾಲುಮರಗಳ ಸುತ್ತಮುತ್ತಲು 8 ಅಡಿ ವಳಗೆ ಗ್ರಾವಲ ಗುಂಡಿಗಳನ್ನು ತೆಗಿಯದಂತೆ ಇಂಜಿನಿಯರ್ ಇಲಾಖೆಗೆ ಬರೆಸಬೇಕು.

(iii) ಒಣಗಿದ ಮರಗಳನ್ನು ಹರಾಜು ಮಾಡುವದರಿಂದ ಉತ್ಪತ್ತಿಯಾದ ಮೊಬಲಗನ್ನು ಫಾರೆಸ್ಟು ರೆವಿನ್ಯೂಗೆ ಬದಲಾಗಿ ಡಿಸ್ಟ್ರಿಕ್ಟ್ ಫಂಡಿಗೆ ಜಮಾ ಕಟ್ಟಿಸಬೇಕು. ಈ ಪೈಕಿ ಮೊದಲನೇ ಪ್ರಶ್ನೆ ವಿಚಾರಕ್ಕೆ ರಿಪೋರ್ಟು ಮಾಡಲು ತಾಲ್ಲೂಕಿಗೆ ಬರೆಸಬೇಕೆಂತಲೂ 2ನೆ ಪ್ರಶ್ನೆ ವಿಷಯದಲ್ಲಿ ಅಂಥಾ ಸಂದರ್ಭಬಿದ್ದಾಗ ಬೋರ್ಡಿನ ನೋಟೀಸಿಗೆ ತರಬೇಕೆಂತಲೂ ಮೂರನೇ ವಿಷಯದಲ್ಲಿ ಹಾಲಿ ಇರುವ ರೂಲ್ಸು ಸ್ಪಷ್ಟವಾಗಿಯೂ ಸಾಕಾಗಿಯೂ ಇರುತ್ತವೆಂತ ತೀರ್ಮಾನ ಮಾಡಲ್ಪಟ್ಟಿತು.

XVI. ಮ॥ ನಾಡಿಗ ಕೃಷ್ಣಪ್ಪನವರು ಪ್ರಪೋಜ್ ಮಾಡಿದ—(1) ಕೃಷ್ಣರಾಜಪೇಟೆಯಲ್ಲಿ ಒಂದು ಮುಸಾಫರಖಾನೆಯನ್ನು ಕಟ್ಟಬೇಕೆಂಬ ವಿಚಾರದಲ್ಲಿ, ಮುಸಾಫರಖಾನೆಗೆ ಬದಲಾಗಿ ಹಾಲಿ ಇರುವ ಛತ್ರವನ್ನೇ ರಿಪೇರಿ ಮಾಡಬೇಕೆಂದು ಮುಜರಾಯಿ ಇಲಾಖೆಗೆ ಬರೆಯಬೇಕೆಂತಲೂ (2) ಕೃಷ್ಣರಾಜಪೇಟೆ ಕೆರೆ ಏರಿ ಕೆಳಗೆ ಇರುವ ಕೊಳವನ್ನು ರಿಪೇರಿ ಮಾಡಬೇಕು. (3 ಕೃಷ್ಣರಾಜಪೇಟೆ ಅಕ್ಕಿಹೆಬ್ಬಾಳು ರಸ್ತೆಯ ರಿಪೇರಿಗಾಗಿ ಸಾಲಿಯಾನ ರಿಪೇರಿಗಾಗಿ ಕೊಡುವ ಮೊಬಲಗನ್ನು ರಸ್ತೆಯನ್ನು 2—3 ಮೈಲಿ ವರಿಗೂ ಪೂರ್ತಿಯಾಗಿ ರಿಪೇರಿ ಮಾಡಲು ಉಪಯೋಗಿಸಬೇಕೆಂಬ ಇವೆರಡು ವಿಷಯಗಳಿಗೆ ತಕ್ಕ ಕ್ರಮ ನಡಿಸಲು ತಾಲ್ಲೂಕು ಬೋರ್ಡಿಗೆ ಬರೆಯಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XVII. ಸಂತೆಮರಹಳ್ಳಿ ಮಾರ್ಕೆಟ್ ಸರಹದ್ದಿನಲ್ಲಿ ಬಸವನಗುಡಿಬಳಿ ಇರುವ ಹಳ್ಳವನ್ನು ಮುಚ್ಚಿಸಬೇಕೆಂತಲೂ, ಚಾಮರಾಜನಗರದ ತಾಲ್ಲೂಕು ಪೂರ್ವಕ್ಕೆ ಕೆಲವು ರಸ್ತೆಗಳನ್ನು ಮಾಡಬೇಕೆಂತಲೂ ಬಜೆಟ್ ಗ್ರಾಂಟಿನ ಅರ್ಧವನ್ನು ಜರೂರಿಯಾತಿ ಕೆಲಸಕ್ಕೆ ಅಮಲ್ದಾರರು ವೆಚ್ಚಮಾಡಲು ಅಪ್ಪಣೆ ಕೊಡಬೇಕೆಂತಲೂ ಸಹ ಪ್ರಪೋಜ್ ಮಾಡಿದ್ದರ ಮೇಲೆ 1—2ನೆ ಪ್ರಶ್ನೆಗಳನ್ನು ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಬೇಕೆಂತಲೂ, ಮೂರನೇ ಸಂಗತಿಗೆ ಹಾಲಿ ಇರುವ ರೂಲ್ಸ್‌ಗಳೇ ಸಾಕಾಗಿದೆಯೆಂತಲೂ ತೀರ್ಮಾನ ಮಾಡಲ್ಪಟ್ಟವು.

XIX. ಮುಂದಿನ ಬೋರ್ಡಿನ ಮೀಟಿಂಗನ್ನು 1904ನೆ ಜುಲೈ ಮಾಹೆ 30ನೆ ತಾರೀಖು ಶನಿವಾರ ಮಾಡಬೇಕೆಂತಲೂ ಆ ಮಾಹೆ 15ನೆ ತಾರೀಖು ಒಳಗಾಗಿ ಮೆಂಬರುಗಳು ಪ್ರಪೋಜಲ್‌ಗಳನ್ನು ಕಳುಹಿಸಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XX. ಗೈರಹಾಜರಾದ ಮೆಂಬರುಗಳ ಪೈಕಿ ಸೆಷನ್ ಕೋರ್ಟಿನಲ್ಲಿ ಕೆಲಸವಿತ್ತೆಂದು ಸ್ಕೂಲಿನ ಡೆಪ್ಯುಟಿ ಇನ್ಸ್‌ಪೆಕ್ಟರು ಸಮಜಾಯಿಷಿ ಕೊಟ್ಟಿರುತ್ತಾರೆ. ಇತರ ಮೆಂಬರುಗಳು ಈ ಭಾಗದಲ್ಲಿ ಸಮಜಾಯಿಷಿ ಕೊಟ್ಟಿಲ್ಲ.

ಸಿ. ಕೃಷ್ಣರಾವ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಅರ್ಜಿ ನಂಬರ 8.

ಮೃತಪಟ್ಟ ಮೇಸ್ತ್ರಿ ಧನಾಜಿರಾಯರೆಂಬುವರ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ಬೆಂಗಳೂರು ದಂಡು ಸೂಳೆಯಲ್ಲಿರುವ 1ನೆ ಸುಬ್ಬರಾವು, 2ನೆ ಸಂತೂಜಿರಾವು, ಮೃತಪಟ್ಟ ಸದರೀ ಮೇಸ್ತ್ರಿ ಧನಾಜಿರಾಯರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಬಸವನಗುಡಿ ಎಕ್ಸ್‌ಟೆನ್ಷನ್ ವಾಸಸ್ಥರಾಗಿ ಮೃತಪಟ್ಟ ಮೇಸ್ತ್ರಿ ಧನಾಜಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸುಬ್ಬರಾವು, 2ನೆ ಸಂತೂಜಿರಾಯರ ಅರ್ಜಿಯನ್ನು ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು (ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಚಾರಣೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೇಸ್ತ್ರಿ ಧನಾಜಿರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 578.

ಅರ್ಜೀದಾರರು ಮಳವಳ್ಳಿ ತಾಲ್ಲೂಕು ಕಸಬಾದಲ್ಲಿರುವ ಅರಸೀಕೆರೆ ತಾಲ್ಲೂಕು ಹೆಡ್ ಗುಮಾಸ್ತ ಮಲ್ಲಣ್ಣಯ್ಯನವರ ಹೆಂಡತಿ ಪುಟ್ಟಮ್ಮನವರು, ಮೈನರಾದ ಮಳವಳ್ಳಿ ಸ್ಥಳದ ಪವತಿಯಾದ ಮಲ್ಲಣ್ಣಯ್ಯನವರ ಮಗ 1ನೆ ಸುಬ್ರಾಯ, ಮಗಳು 2ನೆ ಸುಬ್ಬಮ್ಮ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸುಬ್ರಾಯ, ಸುಬ್ಬಮ್ಮ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮಳವಳ್ಳಿ ಸ್ಥಳದ ಪುಟ್ಟಮ್ಮನವರು ಸದರೀ ಮೈನರ್ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1904ನೆ ಇಸವಿ ಆಗಸ್ಟು ತಾರೀಖು 19ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ್ 1904ನೆ ಇಸವಿ ಜುಲೈ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—04ನೆ ಇಸವಿ ಮಿ॥ ಅರ್ಜೀ ನಂಬರ್ 584.

ಅರ್ಜೀದಾರಳು ನಂಜಿನಗೂಡು ತಾಲ್ಲೂಕು ಕಸಬಾದಲ್ಲಿರುವ ನಾಯಕಸಾನಿ ಚಿಕ್ಕ ಮಗಳು ವೆಂಕಟಲಕ್ಷ್ಮಿ, ಮೈನರಾದ ನಂಜಿನಗೂಡು ಸ್ಥಳದ ದೇವಿಯು ಮಕ್ಕಳು 1. ರಾಮಲಿಂಗ, 2. ಶಿವ, 3. ಪಾರ್ವತಿ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಲಿಂಗ, ಶಿವ, ಪಾರ್ವತಿಯರಿಗೆ ಗಾರ್ಡಿಯನ್ ಆಗಬೇಕೆಂಬ ಹಕ್ಕಿನ ಮೇಲೆ ನಂಜಿನಗೂಡು ಸ್ಥಳದ ವೆಂಕಟಲಕ್ಷ್ಮಿ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1904ನೆ ಇಸವಿ ಆಗಸ್ಟು ತಾರೀಖು 12ರಲ್ಲು ಮೊಕರ್ರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ್ 1904ನೆ ಇಸವಿ ಜುಲೈ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಪೋಸ್ಟು ಮಾಸ್ಟರು ಸುಬ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತಿ॥ ನರಸೀಪುರದ ತಾಲ್ಲೂಕು ಬನ್ನೂರಿನಲ್ಲಿರುವ ಲೇಟ್ ಬ್ರಾಂಚ್ ಪೋಸ್ಟು ಮಾಸ್ಟರು ಸುಬ್ರಾಯರ ಕುಟುಂಬ ಪಾರ್ವತಮ್ಮ, ಮೃತಪಟ್ಟ ಸದರೀ ಸುಬ್ರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬನ್ನೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸುಬ್ರಾಯರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜುಲೈ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರು 592.

ಮೃತಪಟ್ಟ ಮುನಿಯಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ನಾರಾಯಣಮ್ಮ, 2ನೆ ಅನ್ನಪೂರ್ಣಮ್ಮ, 3ನೆ ಶೇಷಮ್ಮ ಇವರುಗಳ ಮೈನರ್ ಗಾರ್ಡಿಯನ್ ಮೈಸೂರು ದೇವರಾಜಮೊಹಲ್ಲಾ ಆನೆ ಸಾರೋಟು ಬೀದಿಲಿರುವ ಬೆಂಗಳೂರು ನಾಗಮ್ಮನವರು, ಮೃತಪಟ್ಟ ಸದರೀ ಮುನಿಯಮ್ಮನವರಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮುನಿಯಮ್ಮನವರ ಜಿಂದಿಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟು ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಯಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1904ನೆ ಇಸವಿ ಜುಲೈ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಮೊಹರು ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜಿರವರ ಕೋರ್ಟಿನಲ್ಲಿ.

1904—1905ನೆ ಇಸವಿ ಅರ್ಜೀ ನಂ. 14.

ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಡೂರು ಡಿಸ್ಟ್ರಿಕ್ಟ್ ಕಡೂರುನಲ್ಲಿರುವ ಸಂಪತ್ಕುಮಾರಯ್ಯಂಗಾರ್ ಮೈನರ್, ಗಾರ್ಡಿಯನ್ ತಂದೆ ಎಂ. ವಿ. ನರಸಿಂಹಾಚಾರ್, ಹಾಸ್ಪಿಟಲ್ ಅಸಿಸ್ಟೆಂಟ್ ಮೊಸಲಿಕಟ್ಟೆ ಸಾಯರ್ ಸೂಪರ್ಟೆಂಡೆಂಟ್ ಆಗಿದ್ದು ಪೆನ್ಷನ್ ತೆಗದುಕೊಳ್ಳುತ್ತಿದ್ದು ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರಿಗೆ ಮಗಳ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಕಡೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಪತ್ಕುಮಾರೈಯ್ಯಂಗಾರ್ ಮೈನರ್, ಗಾರ್ಡಿಯನ್ ತಂದೆ ಎಂ. ವಿ. ನರಸಿಂಹಾಚಾರ್ ಯವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸರ್ 1904ನೆ ಇಸವಿ ಜುಲೈ 22ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಶಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಸರ್ 1904—1905ನೆ ಇಸವಿ ಅರ್ಜೀ ನಂಬರ್ 39.

ಮೃತಪಟ್ಟ ಎಂ. ಆರ್. ತಿರುಮಲಾಚಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರುನಲ್ಲಿರುವ ನಾರಾಯಣಾ, ವಯಸ್ಸು 5 ವರುಷ, ಮೈನರ್, ಗಾರ್ಡಿಯನ್ ಎಂ. ಅಳಿಸಿಂಗ್ರಾಚಾರ್, ಚಿಕ್ಕಮಗಳೂರು ಗೌರ್ನಮೆಂಟ್ ಸ್ಕೂಲಿನಲ್ಲಿ ಟೀಚರ್ ಆಗಿ ಇದ್ದಾರೆ, ಮೃತಪಟ್ಟ ಎಂ. ಆರ್. ತಿರುಮಲಾಚಾರ್ಯರಿಗೆ ಮೈನರ್ ನಾರಾಯಣ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಎಂ. ಆರ್. ತಿರುಮಲಾಚಾರ್ಯರವರ ಜೆಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣ ಮೈನರ್, ಗಾರ್ಡಿಯನ್ ಅಳಿಸಿಂಗರಾಚಾರ್ ಯವರ ಅರ್ಜಿಯನ್ನು ಸರ್ 1904ನೆ ಇಸವಿ ಆಗಸ್ಟ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ಆರ್. ತಿರುಮಲಾಚಾರ್ಯರಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1904ನೆ ಇಸವಿ ಜುಲೈ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಶಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಎಂ. ಹಂಚಾಹುಸೇನ್,
ಸಬ್ ಜಡ್ಜಿ.